ಭಾರತೀಯ ಸ್ಟೇಟ್ ಬ್ಯಾಂಕ್

ಒತ್ತಡಗ್ರಸ್ತ ಆಸ್ತಿಗಳ ನಿರ್ವಹಣಾ ಶಾಖೆ, ಬೆಂಗಳೂರು

ಅಧಿಕೃತ ಅಧಿಕಾರಿಯವರ ವಿವರ :
ಹೆಸರು : ಶ್ರೀ ರಘುನಂದನ್ ಕೆ.,
ಸಹಾಯಕ ಮಹಾ ಪ್ರಬಂಧಕರು (CLO -2)
ಮೊಬೈಲ್ : +91 9148103793
ದೂರವಾಣಿ (ಕಚೇರಿ): 080-25943474
E-Mail: sbi.04209@sbi.co.in

ಶಾಖಾ ವಿಳಾಸ : 2ನೇ ಮಹಡಿ, ಆಫೀಸ್ ಕಾಂಪ್ಲೆಕ್ಸ್ ಕಟ್ಟಡ, ಎಸ್‌ಬಿಐ ಸ್ಥಳೀಯ ಪ್ರಧಾನ ಕಚೇರಿ ಆವರಣ, ನಂ. 65, ಸೇಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು-560 001
ಸಂಪರ್ಕಿಸಿ: ಶ್ರೀ ಎಂ. ಎನ್. ಸೋಮಸುಂದರ್, ಮೊ: +919448978215
ದೂರವಾಣಿ ಸಂಖ್ಯೆ : 080-25943479, ಫ್ಯಾಕ್ಸ್ : 080-22225203
E-Mail: sbi.04209@sbi.co.in

ಅಸೆಂಡಿಕ್ಸ್ - II-A ಮತ್ತು IV-A
[ನಿಯಮ 8(6) ಮತ್ತು 9(1) ರ ಅನ್ವಯ]
ಇ-ಹರಾಜು ಮಾರಾಟ ದಿನಾಂಕ 23.07.2026 ರಂದು
ಸ್ಥಿರಾಸ್ತಿಯ ಹರಾಜು ಮಾರಾಟದ ಮಾರಾಟ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) ಮತ್ತು 9(1) ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ (ಅಲ್ಲಿರುವ ಚರಾಸ್ತಿಗಳನ್ನು ಹೊರತುಪಡಿಸಿ) ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ /ಅಡಮಾನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಸಾಂಕೇತಿಕವಾಗಿ ಸ್ವಾಧೀನ್ಯಕ್ಕೆ ಪಡೆದುಕೊಂಡಿದ್ದು ಅದನ್ನು 'ಎಲ್ಲಿ ಹೇಗಿದೆಯೊ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಅಲ್ಲಿ ಏನಿದೆಯೋ ಹಾಗೆ' ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರಾದ **ಮೆ. ಶಶಿಧರ ಗ್ರೂಪ್ ಆಫ್ ಹಾಸ್ಪಿಟಲ್,** ಮಮತಾ ಹೆಲ್ತ್ ಸೆಂಟರ್, ನಂ. 3440, 14 ಅಡ್ಡರಸ್ತೆ, ಆರ್. ಪಿ. ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ – 571 301. ಪ್ರತಿನಿಧಿಸುವವರು ಇದರ ಪಾಲುದಾರರು/ಜಾಮೀನುದಾರರು/ ಅಡಮಾನುದಾರರಾದ **ಡಾ॥ ಕವಿತಾ ಶಶಿಧರ , ಡಾ॥ ಶಶಾಂಕ ಕೆ. ಎಸ್. ಡಾ॥ ಶ್ರೀ ರಮಿತೇಜ್ ಬಿ. ಪಿ., ಮತ್ತು ಮೆ. ಓರಿಯೆಂಟ್ ಲ್ಯಾಬ್ಸ್ ಪ್ರತಿನಿಧಿಸುವವರು : ಡಾ॥ ಕವಿತಾ ಶಶಿಧರ, ಮಾಲೀಕರು** ನಂ. 3070/ಎ, 14 ಅಡ್ಡರಸ್ತೆ, ಆರ್. ಪಿ. ರಸ್ತೆ, ನಂಜನಗೂಡು, ಮೈಸೂರು – 571 301. ಮಾಲೀಕರು/ ಜಾಮೀನುದಾರರು/ ಅಡಮಾನುದಾರರು ಡಾ॥ ಕವಿತಾ ಶಶಿಧರ್, ಮಾಲೀಕರು ಮತ್ತು ಜಾಮೀನುದಾರರು ಮತ್ತು ಡಾ. ಶಶಾಂಕ್ ಕೆ.ಎಸ್, ಜಾಮೀನುದಾರರು ವಾಸ : ನಂ. 3440, 14ನೇ ಅಡ್ಡರಸ್ತೆ, ಆರ್. ಪಿ. ರಸ್ತೆ, ನಂಜನಗೂಡು, ಮೈಸೂರು – 571 301. **ಮೆ. ಶಶಿಧರ ಗ್ರೂಪ್ ಆಫ್ ಹಾಸ್ಪಿಟಲ್,** ಇವರಿಂದ ಬರಬೇಕಾದ ಮೊತ್ತ **ರೂ.7,15,68,973.00** (ರೂಪಾಯಿ ಏಳು ಕೋಟಿ ಹದಿನೈದು ಲಕ್ಷ ಅರವತ್ತೆಂಟು ಸಾವಿರದ ಒಂಬೈನೂರ ಎಪ್ಪತ್ತೆ ಮೂರು ಮಾತ್ರ) ಮತ್ತು **ಮೆ. ಓರಿಯೆಂಟ್ ಲ್ಯಾಬ್ಸ್,** ಇವರಿಂದ ಬರಬೇಕಾದ ಮೊತ್ತ **ರೂ.3,80,10,021/-** (ರೂಪಾಯಿ ಮೂರು ಕೋಟಿ ಎಂಬತ್ತು ಲಕ್ಷ ಹತ್ತು ಸಾವಿರದ ಇಪ್ಪತ್ತೊಂದು ಮಾತ್ರ) ಬರಬೇಕಾದ ಒಟ್ಟುಬಾಕಿ ಮೊತ್ತ **ರೂ.10,95,78,994/-** (ರೂಪಾಯಿ ಹತ್ತು ಕೋಟಿ ತೊಂಬತ್ತೆದು ಲಕ್ಷ ಎಪ್ಪತ್ತೆಂಟು ಸಾವಿರದ ಒಂಬೈನೂರ ತೊಂಬತ್ತನಾಲ್ಕು ಮಾತ್ರ) ದಿನಾಂಕ 17.06.2026 ರಂತೆ ಮತ್ತು ದಿನಾಂಕ 18.06.2026ರಿಂದ ಒಪ್ಪಂದದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **23.07.2026**ರಂದು ಮಾರಾಟ ಮಾಡಲಾಗುವುದು.
ಮಾರಾಟಕ್ಕಿರುವ ಆಸ್ತಿಯ ಮೀಸಲು ಬೆಲೆ , ಮುಂಗಡ ಠೇವಣಿ (ಇಎಂಡಿ), ಬಿಡ್ ಗುಣಾಂಕ , ಇ-ಹರಾಜು ಮಾರಾಟದ ಸಮಯ ಮತ್ತು ಕೈವೈಸಿ ದಾಖಲೆಗಳೊಂದಿಗೆ ಇಎಂಡಿ ಮೊತ್ತವನ್ನು ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಗಿನಂತಿವೆ :

ಆಸ್ತಿ ನಂ.	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟಮಾಡಲಾಗುವುದಿಲ್ಲ	ಮುಂಗಡ ಠೇವಣಿ (ಇಎಂಡಿ)	ಬಿಡ್ ಗುಣಾಂಕ	ಆಸ್ತಿಯ ಇ-ಹರಾಜಿನ ಸಮಯ	ಕೈವೈಸಿ ದಾಖಲೆಗಳೊಂದಿಗೆ ಇಎಂಡಿಯನ್ನು ಸಲ್ಲಿಸಲು ಕೊನೆಯ ದಿನಾಂಕ
1	ರೂ. 12,00,00,000/-	ರೂ.1,20,00,000/-	ರೂ.5,00,000/-	23.07.2026ರ ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆ ವರೆಗೆ ಒಂದು ವೇಳೆ ಬಿಡ್ಡಿಂಗ್ ಮುಂದುವರಿದರೆ ಮಾರಾಟ ಮುಕ್ತಾಯ ವಾಗುವವರೆಗೂ ಪ್ರತಿಯೊಂದು ಬಿಡ್‌ಗೆ 10 ನಿಮಿಷಗಳ ಆವಧಿ ವಿಸ್ತರಣೆ	23.07.2026 ಮಧ್ಯಾಹ್ನ 3.00 ಘಂಟೆಯವರೆಗೆ

ಸ್ಥಿರ ಸ್ವತ್ತುಗಳ ವಿವರ

Tender No. SBIN200076171248

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ತಾಂಡವಪುರ ಗ್ರಾಮ, ಇಲ್ಲಿ ಸರ್ವೆ ನಂ. 482/2ಎ ನಲ್ಲಿರುವ 28 ಗುಂಟೆ ಮತ್ತು ಸರ್ವೆ ನಂ. 482/1 ರಲ್ಲಿರುವ 1 ಎಕರೆ 16 ಗುಂಟೆ, ಒಟ್ಟು 2 ಎಕರೆ 4 ಗುಂಟೆ ಅಂದರೆ 8498.3980 ಚದರ ಮೀಟರ್ ಅಳತೆಯ ಆಸ್ತಿಯು ಕೈಗಾರಿಕಾ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದು ಪಂಚಾಯತ್ ಖಾತಾ / ಆಸ್ತಿ ನಂ. 477/397. ಪಿಐಡಿ ನಂ. 152200503110000910, ಈ ಆಸ್ತಿಯು ಶ್ರೀಮತಿ ಕವಿತ ಶಶಿಧರ ಮತ್ತು ಕೆ.ಎಸ್. ಶಶಾಂಕ ಇವರ ಹೆಸರಿನಲ್ಲಿದ್ದು ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಎಸ್. ನಂ. 483ರಲ್ಲಿರುವ ಜಮೀನು, ಪಶ್ಚಿಮಕ್ಕೆ : ಮೈಸೂರು- ನಂಜನಗೂಡು ರಸ್ತೆ, ಉತ್ತರಕ್ಕೆ: ಕಮಲಾ ನಟೇಶ್‌ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ : ಎಸ್. ನಂ. 481ರಲ್ಲಿರುವ ಜಮೀನು.

ಮೀಸಲು ಬೆಲೆ ರೂ. 12,00,00,000/-

''ಸರ್ಫೇಸಿ'' "SARFAESI" ಆಕ್ಟ್ 2002ರ ಅಡಿಯಲ್ಲಿ 30 ದಿನಗಳ ಶಾಸನ ಬದ್ಧ ಮಾರಾಟ ಸೂಚನೆ

ಸಾಲಗಾರರಿಗೆ / ಜಾಮೀನುದಾರರಿಗೆ / ಅಡಮಾನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ನೋಟೀಸು ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ಬಾಕಿ ಮೊತ್ತ **ರೂ.10,95,78,994/-** (ರೂಪಾಯಿ ಹತ್ತು ಕೋಟಿ ತೊಂಬತ್ತೆದು ಲಕ್ಷ ಎಪ್ಪತ್ತೆಂಟು ಸಾವಿರದ ಒಂಬೈನೂರ ತೊಂಬತ್ತ ನಾಲ್ಕು ಮಾತ್ರ) ದಿನಾಂಕ 17.06.2026 ರಂತೆ ಮತ್ತು ದಿನಾಂಕ 18.06.2026ರಿಂದ ಒಪ್ಪಂದದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳನ್ನು ಪಾವತಿಸಬೇಕು. ವಿಫಲರಾದಲ್ಲಿ ಸರ್ಫೇಸಿ ಆಕ್ಟ್ 2002ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಆಸ್ತಿಯನ್ನು ಬ್ಯಾಂಕಿನಿಂದ ಮಾರಾಟ ಮಾಡಲಾಗುವುದು. ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್, ಆಸ್ತಿ ವಸೂಲಿ ನಿರ್ವಹಣಾ ಶಾಖೆ, ಬೆಂಗಳೂರು ಇದರ ಅಧಿಕೃತ ಅಧಿಕಾರಿಯವರು ನೀಡಿರುವ ಲಿಂಕ್‌ಗಳಲ್ಲಿ ಅಂದರೆ(1) www.baanknet.com, (2) www.sbi.bank.in ನಲ್ಲಿ ವೀಕ್ಷಿಸಬಹುದು.

ದಿನಾಂಕ : 18.06.2026
ಸ್ಥಳ : ಬೆಂಗಳೂರು

ಸಹಿ/- ಸಹಾಯಕ ಮಹಾ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್,
ಎಸ್‌ಎಎಂಬಿ ಶಾಖೆ, ಬೆಂಗಳೂರು

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ವೈದ್ಯಕೀಯ ವಿದ್ಯಾರ್ಥಿಗಳೇ ಹೊಣೆ: ಕೇಂದ್ರ ಸರ್ಕಾರದ ನಡೆಗೆ ಖಂಡನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ವೈದ್ಯಕೀಯ ವಿದ್ಯಾರ್ಥಿಗಳನ್ನು ಹೊಣೆಯಾಗಿಸಿದ ಕೇಂದ್ರ ಸರ್ಕಾರದ ನಡೆಯನ್ನು ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್ ತೀವ್ರವಾಗಿ ಖಂಡಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ನೀಟ್- ಯುಜಿ ಮರು ಪರೀಕ್ಷೆ ಘೋಷಣೆಯಾದ ನಂತರ ಇಲ್ಲಿಯವರೆಗೂ 19 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆದರೆ, ಕೇಂದ್ರ ಸರ್ಕಾರ ಯಾವುದೇ ಹೊಣೆಗಾರಿಕೆಯನ್ನು ವಹಿಸುತ್ತಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆಯ ಮೂಲವನ್ನು ಪತ್ತೆ ಹಚ್ಚುವ ಬದಲಿಗೆ, ಟೆಲಿಗ್ರಾಂ ಬ್ಯಾನ್ ಸೇರಿದಂತೆ ಇತರ ವಿಧಾನಗಳ ಮೂಲಕ ಸಮಸ್ಯೆಯ ಮೂಲವನ್ನು ಇತರೆಡೆಗೆ ದಿಕ್ಕು ತಪ್ಪಿಸಲು ಮುಂದಾಗಿರುವುದು ಹೇಯಕರ ಸಂಗತಿ ಎಂದು ಕಿಡಿಕಾರಿದ್ದಾರೆ.

ಕೋಚಿಂಗ್ ಮಾಫಿಯಾದ ಕಬಂಧ ಬಾಹುಗಳಲ್ಲಿ ನಲುಗುತ್ತಿರುವ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಉಳಿಸುವ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೆ, ಕೇಂದ್ರ ಸರ್ಕಾರ ಇದೀಗ ಎನ್‌ಎಂಸಿ (ರಾಷ್ಟ್ರೀಯ ವೈದ್ಯಕೀಯ ಕೌನ್ಸಿಲ್) ಮೂಲಕ ಒಂದು ಸಾರ್ವಜನಿಕ ನೋಟಿಸ್ ಜಾರಿ ಮಾಡಿದೆ. ಅದರ ಪ್ರಕಾರ, ಸಾಮಾನ್ಯ ವೈದ್ಯಕೀಯ ವಿದ್ಯಾರ್ಥಿಗಳನ್ನು ಪ್ರಶ್ನೆ ಪತ್ರಿಕೆ ಸೋರಿಕೆಗೆ ಜವಾಬ್ದಾರರನ್ನಾಗಿ ಮಾಡಿ, ನೀಟ್ ಮರು ಪರೀಕ್ಷೆ ಹಿನ್ನೆಲೆಯಲ್ಲಿ ದೇಶದ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರಜೆ ನೀಡಬಾರದು ಎಂದು ನಿರ್ದೇಶಿಸಿದೆ. ಅಷ್ಟೇ ಅಲ್ಲದೆ, ಈ ವಿದ್ಯಾರ್ಥಿಗಳು ಹಿಂದೆ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಪಾತ್ರ ವಹಿಸಿದ್ದು, ಇದೀಗ ಅವರು ಪರೀಕ್ಷೆಯ ಪಾವಿತ್ರತೆಗೆ ಧಕ್ಕೆ ತರದಂತೆ ಗಮನ ಹರಿಸಬೇಕೆಂದು ಮಾರ್ಗಸೂಚಿ ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆ ಕೋಚಿಂಗ್ ಮಾಫಿಯಾ ಕೈವಾಡ ಅಡಗಿರುವುದು ಸ್ಪಷ್ಟವಾಗಿದೆ.

ಆದರೆ, ಈ ಕುರಿತು ಒಂದು ಮಾತನ್ನೂ ಆಡದೇ, ವೈದ್ಯಕೀಯ ವಿದ್ಯಾರ್ಥಿಗಳನ್ನು ತಪ್ಪಿತಸ್ಥರೆಂದು ಬಿಂಬಿಸುತ್ತಿರುವುದು ಅತ್ಯಂತ ಖಂಡನಿಯ. ಎಲ್ಲಾ ವಿದ್ಯಾರ್ಥಿಗಳ ಮೇಲೆ ಕಣ್ಣಾವಲು ಇರಿಸುವ, ಅವರನ್ನು ಅಪರಾಧಿಗಳಂತೆ ನೋಡುವ ಈ ಅನೈತಿಕ ಆದೇಶವನ್ನು ಎನ್‌ಎಂಸಿ ಈ ಕೂಡಲೇ ಹಿಂಪಡೆಯಬೇಕು ಹಾಗೂ ಕೇಂದ್ರ ಸರ್ಕಾರವೇ ನೇರವಾಗಿ ಪ್ರಶ್ನೆಪತ್ರಿಕೆ ಸೋರಿಕೆ ನೈತಿಕ ಜವಾಬ್ದಾರಿ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಬನ್ನೂರು ರಾಜುಗೆ ಕಸಾಪ ಅಭಿನಂದನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಲೇಖಕ ಬನ್ನೂರು ಕೆ. ರಾಜು ಅವರಿಗೆ ಕಳೆದ ಸುಮಾರು ನಾಲ್ಕುದಶಕಗಳಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಬನ್ನೂರು ರಾಜು ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಸ್ತುತ ಸಾಲಿನ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಬನ್ನೂರು ರಾಜು ಅವರಿಗೆ ನೀಡಿ ಗೌರವಿಸಿದೆ.

ಈ ಹಿನ್ನೆಲೆಯಲ್ಲಿ ಕಸಾಪ ಬನ್ನೂರು ಕೆ. ರಾಜು ಅವರನ್ನು ಅಭಿನಂದಿಸಿತು. ರಾಜು ಅವರ ಸ್ವಗೃಹದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರು ಪ್ರಶಸ್ತಿ ಪುರಸ್ಕೃತ ರಾಜು ಅವರಿಗೆ ಶಾಲು ಹೊದಿಸಿ, ಹಾರ ತುರಾಯಿ ಸಹಿತ ಫಲ ತಾಂಬೂಲ ನೀಡಿ ಸಿಹಿ ವಿತರಿಸಿ ಸನ್ಮಾನಿಸಿದರು. ಈ ವೇಳೆ ಸಂಸ್ಕೃತಿ ಚಿಂತಕ ಕೆ. ರಘುರಾಮ್ ವಾಜಪೇಯಿ, ಪತ್ರಕರ್ತ ರಂಗನಾಥ್ ಮೈಸೂರು, ಅನಂತ, ಅಮೋಘವರ್ಷ ಎಸ್. ನಾಗರಾಜು, ಮೈಸೂರು ಯೋಗೀಶ್ ಟ್ರಸ್ಟ್ ಸಂಸ್ಥಾಪಕ ಯೋಗ ಪ್ರಕಾಶ್, ಸತೀಶ್ ಇದ್ದರು.

ಮೈಸೂರಿನ ಮಾಧವ ಕೃಪಾದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಹಾಗೂ ರಾಷ್ಟ್ರೋತ್ಥಾನ ಸಾಹಿತ್ಯ, ವನವಾಸಿ ಕಲ್ಯಾಣ,ಮಂಥನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವಿಶ್ರಾಂತ ಧ್ಯೇಯಜೀವಿ ಗ್ರಂಥವನ್ನು ಉದ್ಯಮಿ ಜಗನ್ನಾಥ ಶೆಣೈ ಬಿಡುಗಡೆಗೊಳಿಸಿದರು. ಆರ್.ಎಸ್.ಎಸ್ ಜೇಷ್ಠ ಪ್ರಚಾರಕ ಸು. ರಾಮಣ್ಣ, ರಂಗನಾಥ್ ಇದ್ದಾರೆ.

ಮೈಸೂರಿನ ಸುರುಚಿ ರಂಗಮನೆಯಲ್ಲಿ ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ ತಿಂಗಳ ತಿಳಿವು ಮಾಲಿಕೆ – 2ರ ಕಾರ್ಯಕ್ರಮದಲ್ಲಿ ಪೀಹೆನ್ಸ್‌ಪ್ಯೆಡ್ ಕೃತಿಯನ್ನು ನವ ಕರ್ನಾಟಕ ಪ್ರಕಾಶನದ ಎನ್.ಕೆ. ಸತ್ಯನಾರಾಯಣ ಬಿಡುಗಡೆಗೊಳಿಸಿದರು. ಡಾ. ಕಲ್ಪನಾ ಮುಕುಂದ್ ಅಯ್ಯಂಗಾರ್, ಬಿ.ಕೆ. ಮೀನಾಕ್ಷಿ, ರಘುಪತಿ ಶೃಂಗೇರಿ, ಡಾ. ಜಯಗೌರಿ, ಉಷಾ ನರಸಿಂಹನ್ ಮೊದಲಾದವರು ಇದ್ದರು.

ಮೈಸೂರಿನ ಶಾರದಾವಿಲಾಸ ಫಾರ್ಮಸಿ ಕಾಲೇಜಿನಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಎಸ್‌ಎಸ್ ಯೋಗ ಸಂಸ್ಥಾಪಕ ಯೋಗಾತ್ಮ ಶ್ರೀಹರಿ ಮಾತನಾಡಿದರು. ಯೋಗಾಚಾರ್ಯ ರಾಕೇಶ್, ಡಾ. ಹನುಮಂತಚಾರ್ ಜೋಶಿ, ಆರ್. ದಿನೇಶ್ ಇದ್ದಾರೆ.

ಮೈಸೂರು ವಿವಿ ಮನಶಾಸ್ತ್ರ ಅಧ್ಯಯನ ವಿಭಾಗವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳ ಪ್ರಾಧ್ಯಾಪಕ ಪ್ರಶಸ್ತಿ ಪಡೆದ ಡಾ. ಮೇವಾ ಸಿಂಗ್ ಅವರನ್ನು ಸನ್ಮಾನಿಸಲಾಯಿತು. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪ್ರೊ. ಸಂಪತ್‌ಕುಮಾರ್, ಇಂಚರಾ, ಚಾಮಯ್ಯ ಸ್ವಾಮಿ, ಡಾ.ಎಚ್.ಕೆ. ಮಂಜು ಇದ್ದಾರೆ.

5 ರೆಸ್ಟೋರೆಂಟ್‌ಗಳಲ್ಲಿ ಅಕ್ರಮ ಮದ್ಯ ಸರಬರಾಜು: ಪ್ರಕರಣ ದಾಖಲು

• **ಕನ್ನಡಪ್ರಭ ವಾರ್ತೆ** ಮೈಸೂರು

ಅಕ್ರಮವಾಗಿ ಮದ್ಯ ಸರಬರಾಜು ಮಾಡುತ್ತಿದ್ದ 5 ರೆಸ್ಟೋರೆಂಟ್ ಮಾಲೀಕರ ವಿರುದ್ಧ ಅಬಕಾರಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಕರಣ ದಾಖಲಿಸಿದ್ದಾರೆ.

ಸಿದ್ದಲಿಂಗಪುರ, ದೇವೇಗೌಡ ವೃತ್ತ, ದಟ್ಟಗಳ್ಳಿ ಹೊರ ವರ್ತುಲ ರಸ್ತೆ, ಆಲನಹಳ್ಳಿ ವರ್ತುಲ ರಸ್ತೆಯಲ್ಲಿರುವ 5 ರೆಸ್ಟೋರೆಂಟ್ ಗಳಲ್ಲಿ ಅಕ್ರಮವಾಗಿ ಮದ್ಯ ಸರಬರಾಜು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅಬಕಾರಿ ಇಲಾಖೆ ಮೈಸೂರು ವಿಭಾಗದ ಜಂಟಿ ಆಯುಕ್ತ ಬಸವರಾಜ್ ಹಡಪದ, ಉಪ ಆಯುಕ್ತ ನಾಗರಾಜಪ್ಪ, ಅಧೀಕ್ಷಕ ಜಿ. ವಿವೇಕ್ ಮತ್ತು ಉಪ ಅಧೀಕ್ಷಕ ಎಲ್.ಬಿ. ವಿಕ್ರಂ ನೇತೃತ್ವದಲ್ಲಿ 4 ತಂಡವು ಶುಕ್ರವಾರ ರಾತ್ರಿ 28 ಕಡೆ ಕಾರ್ಯಾಚರಣೆ ನಡೆಸಿ, 5 ಅಂಗಡಿ ಅಕ್ರಮವನ್ನು ಪತ್ತೆ ಹಚ್ಚಿದ್ದಾರೆ.

ಕನ್ನಡಪ್ರಭ
ಪ್ರತಿ ಭಾನುವಾರ ಪ್ರಚಲಿತ ವಿದ್ಯಮಾನ, ಸಾಹಿತ್ಯ, ಚಿಣ್ಣರಾಟ, ಪ್ರವಾಸ, ಆಹಾರ ವಿಷಯಗಳ ಸಮೃದ್ಧ ಮಾಹಿತಿ
ART | LITERATURE | CULTURE | FOOD | TRAVEL
ಭಾನುಪ್ರಭ

ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್

ನೋಂದಾಯಿತ ಕಛೇರಿ: 27, ಬಿಕೆಸಿ, ಸಿ-27, ಜಿ ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂ) ಮುಂಬೈ-400 051.
ಶಾಖಾ ಕಛೇರಿ: ಸಂ. 60, ಗಾಂಧಿ ಬಜಾರ್ ರಸ್ತೆ, ಬಸವನಗುಡಿ,ಬೆಂಗಳೂರು- 560004.
ಕಾರ್ಪೋರೇಟ್ ಐಡೆಂಟಿಟಿ: L65110MH1985PLC038137, www.kotak.com

2002ರ ಸರ್ಫೇಸಿ ಕಾಯಿದೆ, ಯು/ಎಸ್ 13(4)ರಡಿಯಲ್ಲಿ 2002ರ ಆರ್/ಡಬ್ಲ್ಯೂ ನಿಯಮ 8(1)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳಡಿ ಸ್ಥಿರಾಸ್ತಿಗಳ ಸ್ವಾಧೀನ ನೋಟೀಸ್

ಆದಾಗ್ಯೂ, ಕೆಳಸಹಿದಾರರು ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್ ಇದರ ಅಧಿಕೃತ ಅಧಿಕಾರಿಯಾಗಿ ನಿಯಮ 2002ರಡಿ ದಿನಾಂಕ